ದೂರವಾಣಿ ಸಂಖ್ಯೆ : 080-22212343
ಫ್ಯಾಕ್ಸ್ ಸಂಖ್ಯೆ : 080-22278803
Website : https://kptcl.karnataka.gov.in
ಇ-ಮೇಲ್ ವಿಳಾಸ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521
ಕಂಪನಿಯ ಅಧಿಕೃತ ಕಛೇರಿ : ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು-560 009

ವಿಷಯ: ರಾಯಚೂರು ಹಾಗೂ ಚಾಮರಾಜನಗರ (ದೊಡ್ಡರಾಯಪೇಟೆ) ಗಳಲ್ಲಿನ ಕವಿಪ್ರನಿನಿ 220ಕೆ.ವಿ ಉಪಕೇಂದ್ರಗಳ ಆವರಣದಲ್ಲಿ ಕವಿಪ್ರನಿನಿ ನೌಕರರ ಸಂಘದ ಸಮುದಾಯ ಭವನಗಳನ್ನು ನಿರ್ಮಿಸಲು ನಿಗಮದ ಜಾಗವನ್ನು ಲೀಸ್ ಆಧಾರದ ಮೇಲೆ ನೀಡಲು ಕೋರಿರುವ ಬಗ್ಗೆ.

ಓದಿದೆ:
1. ಪ್ರಧಾನ ಕಾರ್ಯದರ್ಶಿಗಳು, ಕವಿಪ್ರನಿನಿ ನೌಕರರ ಸಂಘ, ಬೆಂಗಳೂರು ರವರ ಪತ್ರ ಸಂಖ್ಯೆ: ಕವಿಪ್ರನಿನಿ.ನೌ.ಸ/663/2011-12.ದಿನಾಂಕ 19/09/2011.
2. ಸಂಘಟನಾ ಕಾರ್ಯದರ್ಶಿ, ಕವಿಪ್ರನಿನಿ ನೌಕರರ ಸಂಘ, ರಾಯಚೂರು ರವರ ಪತ್ರ ಸಂಖ್ಯೆ: ಕವಿಪ್ರನಿನಿ ನೌ.ಸ/ಸಂ.ಕಾ/ರಾ/2021-22/113-22 ದಿನಾಂಕ 17/09/2021.
3. ಮು.ಇಂ (ವಿ)/ಪ್ರ.ವ/ಗು/ಸಿವಿಲ್/2021-22/12146-49 ದಿನಾಂಕ 05/01/2022.
4. ಮು.ಇಂ (ವಿ)/ಪ್ರ.ವ/ಕಾ.ನಿ.ಇಂ(ಸಿ)/ಮೈ2020-21/11959-61 ದಿನಾಂಕ 24/03/2021.
5. ದಿನಾಂಕ 18/04/2022 ರಂದು ನಡೆದ 130 ನೇ ಕವಿಪ್ರನಿನಿ ಮಂಡಳಿ ನಿರ್ದೇಶಕರುಗಳ ಸಭೆಯ ನಡವಳಿಗಳು.

**ಪ್ರಸ್ತಾವನೆ:**

1. ಕವಿಪ್ರನಿನಿ ನೌಕರರ ಸಂಘವು ರಾಯಚೂರು 220ಕೆ.ವಿ ಉಪಕೇಂದ್ರದ ಆವರಣ ಹಾಗೂ ಚಾಮರಾಜನಗರ (ದೊಡ್ಡರಾಯಪೇಟೆ) 220ಕೆ.ವಿ ಉಪಕೇಂದ್ರದ ಆವರಣಗಳಲ್ಲಿ, ಸಂಘದ ಸಮುದಾಯ ಭವನ ಕಟ್ಟಡಗಳನ್ನು ನಿರ್ಮಿಸಲು ಅನುಕ್ರಮವಾಗಿ 120 ಅಡಿ X 150 ಅಡಿ ಹಾಗೂ 150 ಅಡಿ X 200 ಅಡಿ ಅಳತೆಯ ಜಾಗಗಳನ್ನು ಲೀಸ್ ಆಧಾರದ ಮೇಲೆ ನೀಡುವಂತೆ ಕೋರಿಕೆ ಸಲ್ಲಿಸಿರುತ್ತಾರೆ.

2. ಮುಖ್ಯ ಇಂಜಿನಿಯರ್ (ವಿ), ಪ್ರಸರಣ ವಲಯ, ಕಲಬುರಗಿ ಹಾಗೂ ಮೈಸೂರು ರವರು ರಾಯಚೂರು 220ಕೆ.ವಿ ಉಪಕೇಂದ್ರದ ಆವರಣ ಹಾಗೂ ಚಾಮರಾಜನಗರ (ದೊಡ್ಡರಾಯಪೇಟೆ) 220ಕೆ.ವಿ ಉಪಕೇಂದ್ರದ ಆವರಣಗಳಲ್ಲಿ ಕವಿಪ್ರನಿನಿ ನೌಕರರ ಸಂಘ ಕೋರಿರುವ ಜಾಗಗಳು ಕವಿಪ್ರನಿನಿಯ ಯಾವುದೆ ಅಭಿವೃದ್ಧಿ ಕಾರ್ಯಗಳಿಗೆ ಅವಶ್ಯಕತೆ ಇರುವುದಿಲ್ಲವೆಂದು ಸದರಿ ಜಾಗಗಳನ್ನು ಲೀಸ್ ಆಧಾರದ ಮೇಲೆ ನೀಡಬಹುದೆಂದು ವರದಿ ನೀಡಿರುತ್ತಾರೆ.

3. ಮುಖ್ಯ ಇಂಜಿನಿಯರ್ (ವಿ) (ಯೋ ಮತ್ತು ಸ) ರವರು ಸಹ ಸದರಿ ಉಪಕೇಂದ್ರಗಳ ಆವರಣದಲ್ಲಿ ಕವಿಪ್ರನಿನಿ ನೌಕರರ ಸಂಘ ಕೋರಿರುವ ಜಾಗಗಳು ಉಪಕೇಂದ್ರಗಳ ವಿಸ್ತರಣೆ ಹಾಗೂ ಉನ್ನತೀಕರಣಕ್ಕೆ ಅಡಚಣೆಯುಂಟಾಗುವುದಿಲ್ಲವೆಂದು ಅಭಿಪ್ರಾಯ ನೀಡಿರುತ್ತಾರೆ.

4. ಬೆಂಗಳೂರು ಸೇರಿದಂತೆ ಹಲವಾರು ನಗರ ಪ್ರದೇಶಗಳಲ್ಲಿ ಕವಿಪ್ರನಿನಿಯ ಎಲ್ಲಾ ಸಂಘ / ಸಂಸ್ಥೆಗಳ ಕಟ್ಟಡಗಳನ್ನು ನಿರ್ಮಿಸಲು ಜಾಗಗಳನ್ನು ಲೀಸ್ ಆಧಾರದ ಮೇಲೆ ಹಂಚಿಕೆ ಮಾಡಿದೆ. ಅಂತೆಯೆ, ಕವಿಪ್ರನಿನಿ ನೌಕರರ ಸಂಘದ ಕೋರಿಕೆಯನ್ವಯ, ರಾಯಚೂರು ಮತ್ತು ಚಾಮರಾಜನಗರ (ದೊಡ್ಡರಾಯಪೇಟೆ) 220ಕೆ.ವಿ ಉಪಕೇಂದ್ರಗಳ ಆವರಣಗಳಲ್ಲಿ 120 ಅಡಿ X 150 ಅಡಿ ಅಳತೆಯ ಜಾಗಗಳನ್ನು ಕವಿಪ್ರನಿನಿ ನೌಕರರ ಸಂಘದ ಸಮುದಾಯ ಭವನ ಕಟ್ಟಡಗಳನ್ನು ನಿರ್ಮಿಸಲು 30 ವರ್ಷಗಳ ಲೀಸ್ ಆಧಾರದ ಮೇಲೆ, ಸಾಂಕೇತಿಕವಾಗಿ ವಾರ್ಷಿಕ ಲೀಸ್ ಮೊತ್ತ ರೂ.1,000/- ಗಳಂತೆ ನೀಡುವ ಪ್ರಸ್ತಾವನೆಯನ್ನು, ದಿನಾಂಕ 18/04/2022 ರಂದು ನಡೆದ 130 ನೇ ಮಂಡಳಿ ಸಭೆಯಲ್ಲಿ ಮಂಡಿಸಲಾಗಿತ್ತು.

5. ಕವಿಪ್ರನಿನಿ ಮಂಡಳಿ ಸಭೆಯಲ್ಲಿ ಸದರಿ ಪ್ರಸ್ತಾವನೆಯ ಮೇಲೆ ಈ ಕೆಳಕಂಡಂತೆ ನಿರ್ಣಯ ತೆಗೆದುಕೊಳ್ಳಲಾಗಿದೆ.

*"RESOLVED THAT for the reasons explained, approval be and is hereby accorded to spare the identified KPTCL's land as below to KPTCL Employees' Union for a period of 30 (thirty) years on annual lease basis for construction of their Samudhaya Bhavana buildings towards welfare activities of employees of KPTCL & ESCOM's:*

| *Sl. No.* | *Measurement of Land* | *Location* | *Annual Lease Rent* |
|---|---|---|---|
| *1* | *120ft X 150ft* | *220kV station premises, Raichur* | *Rs.1,000/-* |
| *2* | *120ft S 150ft* | *220kV station premises, Chamarajanagar (Doddarayapete)* | *Rs.1,000/-* |

*FURTHER RESOLVED THAT the Director (Admin &HR), KPTCL be and is hereby authorized to issue necessary orders accordingly".*

6. ಮಂಡಳಿ ಸಭೆಯ ನಿರ್ಣಯದಂತೆ ಈ ಕೆಳಕಂಡಂತೆ ಆದೇಶಿಸಲಾಗಿದೆ.

**ಆದೇಶ ಸಂಖ್ಯೆ: ಕವಿಪ್ರನಿನಿ/ಬಿ7/21347/21-22 ಬೆಂಗಳೂರು ದಿನಾಂಕ:17/06/2022**

ದಿನಾಂಕ 18/04/2022 ರ ಕವಿಪ್ರನಿನಿ ಮಂಡಳಿ ಸಭೆಯ ನಿರ್ಣಯದಂತೆ, ರಾಯಚೂರು ಹಾಗೂ ಚಾಮರಾಜನಗರ (ದೊಡ್ಡರಾಯನಪೇಟೆ) 220ಕೆ.ವಿ ಉಪಕೇಂದ್ರಗಳ ಆವರಣಗಳಲ್ಲಿ ಗುರುತಿಸಲಾಗಿರುವ 120ft X 150ft ಅಳತೆಗೆ ಮೀರದಂತೆ, ಖಾಲಿ ಜಾಗಗಳನ್ನು ಕವಿಪ್ರನಿನಿ ನೌಕರರ ಸಂಘದ ಸಮುದಾಯ ಭವನಗಳನ್ನು ನಿರ್ಮಿಸಲು 30 (ಮೂವತ್ತು) ವರ್ಷಗಳ ಅವಧಿಗೆ, ಲೀಸ್ ಆಧಾರದ ಮೇಲೆ, ಪ್ರತಿ ಜಾಗಕ್ಕೆ ವಾರ್ಷಿಕ ಸಾಂಕೇತಿಕ ಲೀಸ್ ಮೊತ್ತ ರೂ.1,000/-(ರೂ. ಒಂದು ಸಾವಿರ ರೂ.ಗಳು ಮಾತ್ರ) ಗಳಂತೆ, ಕವಿಪ್ರನಿನಿ ನೌಕರರ ಸಂಘಕ್ಕೆ ಈ ಕೆಳಕಂಡ ಷರತ್ತುಗಳಿಗೊಳಪಟ್ಟಂತೆ ನೀಡಲು ಆದೇಶಿಸಲಾಗಿದೆ.

1. ರಾಯಚೂರು ಹಾಗೂ ಚಾಮರಾಜನಗರ (ದೊಡ್ಡರಾಯನಪೇಟೆ) ಗಳಲ್ಲಿ 220ಕೆ.ವಿ ಉಪಕೇಂದ್ರಗಳ ಆವರಣದಲ್ಲಿ, ಮುಖ್ಯ ಇಂಜಿನಿಯರ್ (ವಿ), ಪ್ರಸರಣ ವಲಯ, ಕಲಬುರಗಿ ಹಾಗೂ ಮೈಸೂರು ರವರ ಪ್ರಸ್ತಾವನೆಯಲ್ಲಿನ ನಕಾಶೆಯಲ್ಲಿ ಗುರುತಿಸಿರುವಂತೆ, 120ft X 150ft ಅಳತೆಗೆ ಮೀರದಂತೆ ನಿವೇಶನ ಗುರುತಿಸುವುದು.
2. ಕವಿಪ್ರನಿನಿಯ ಸಂಬಂಧಪಟ್ಟ ಟಿಎಲ್ ಮತ್ತು ಎಸ್ಎಸ್ ವಿಭಾಗಗಳ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ರವರುಗಳು ಕವಿಪ್ರನಿನಿ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿಗಳೊಂದಿಗೆ ಲೀಸ್ ಕರಾರು ಒಪ್ಪಂದ ಮಾಡಿಕೊಳ್ಳುವುದು.
3. ಸದರಿ ಜಾಗಗಳನ್ನು ಕವಿಪ್ರನಿನಿ ನೌಕರರ ಸಂಘಕ್ಕೆ ಸಾಂಕೇತಿಕ ವಾರ್ಷಿಕ ಲೀಸ್ ಮೊತ್ತ ಪ್ರತಿ ಜಾಗಕ್ಕೆ ರೂ.1,000/- ಗಳಂತೆ ನಿಗದಿಪಡಿಸುವುದು.

4. ಕವಿಪ್ರನಿನಿ ನೌಕರರ ಸಂಘಕ್ಕೆ ನೀಡಲು ಅನುಮೋದಿಸಿರುವ ಜಾಗಗಳನ್ನು, ಉದ್ದೇಶಿತ ಕಟ್ಟಡಗಳ ನಿರ್ಮಾಣಕ್ಕೆ ಮಾತ್ರ ಉಪಯೋಗಿಸುವಂತೆ ಹಾಗೂ ಬೇರೆ ಯಾವುದೇ ಉದ್ದೇಶಕ್ಕೆ ಬಳಸಬಾರದೆಂಬ ಷರತ್ತು ವಿಧಿಸುವುದು.
5. ಉದ್ದೇಶಿತ ಕಟ್ಟಡಗಳ ನಿರ್ಮಾಣವು ಗರಿಷ್ಠ 3 ವರ್ಷಗಳ ಅವಧಿಯಲ್ಲಿ ಪ್ರಾರಂಭಿಸದಿದ್ದಲ್ಲಿ, ಒಪ್ಪಂದದ ಕರಾರು ರದ್ದಾಗುವುದೆಂಬ ಷರತ್ತು ವಿಧಿಸುವುದು.
6. ನಿಗಮವು ಲೀಸ್ ನೀಡಲು ಅನುಮೋದಿಸಿರುವ ಜಾಗಗಳನ್ನು ಒತ್ತುವರಿಯಾಗದಂತೆ ಸಂರಕ್ಷಿಸಿಕೊಳ್ಳಲು ಸೂಕ್ತ ಕ್ರಮಕೈಗೊಳ್ಳಲು ಕವಿಪ್ರನಿನಿ ನೌಕರರ ಸಂಘಕ್ಕೆ ಸೂಚಿಸುವುದು.
7. ಲೀಸ್ ಆಧಾರದ ಮೇಲೆ ನೀಡಲು ಅನುಮೋದಿಸಿರುವ ಜಾಗಗಳ ಬಗ್ಗೆ, ಟಿಎಲ್ ಮತ್ತು ಎಸ್ಎಸ್ ವಿಭಾಗದ ಆಸ್ತಿ ಪುಸ್ತಕದಲ್ಲಿ, ಅಗತ್ಯ ದಾಖಲಾತಿಗಳನ್ನು ಮಾಡುವುದು.

ಆದೇಶದ ಮೇರೆಗೆ,

ನಿರ್ದೇಶಕರು (ಆ ಮತ್ತು ಮಾ.ಸಂ)
ಕವಿಪ್ರನಿನಿ, ಬೆಂಗಳೂರು.

<u>ಪ್ರತಿ:-ಮಾಹಿತಿಗಾಗಿ:</u>

1. ಮುಖ್ಯ ಇಂಜಿನಿಯರ್ (ವಿ), ಪ್ರಸರಣ ವಲಯ, ಕವಿಪ್ರನಿನಿ, ಮೈಸೂರು/ಕಲಬುರಗಿ.
2. ಮುಖ್ಯ ಇಂಜಿನಿಯರ್ (ವಿ), (ಯೋ ಮತ್ತು ಸ), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
3. ಆರ್ಥಿಕ ಸಲಹೆಗಾರರು (ಲೆ ಮತ್ತು ಸಂ) /(ಆಂತರಿಕ ಪರಿಶೋಧನೆ), ಕವಿಪ್ರನಿನಿ.
4. ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
5. ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು (ಪ್ರಸರಣ)/ ನಿರ್ದೇಶಕರು (ಹಣಕಾಸು)/ ನಿರ್ದೇಶಕರು (ಆ ಮತ್ತು ಮಾ. ಸಂ) ರವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.

**<u>ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ:</u> <u>www.kptcl.karnataka.gov.in</u> ನಲ್ಲಿ ಪ್ರಕಟಿಸಲಾಗಿದೆ.**

1. ಅಧೀಕ್ಷಕ ಇಂಜಿನಿಯರ್ (ವಿ), ಪ್ರಸರಣ (ಕಾ ಮತ್ತು ನಿ) ವೃತ್ತ, ಕವಿಪ್ರನಿನಿ, ಮೈಸೂರು.
2. ಅಧೀಕ್ಷಕ ಇಂಜಿನಿಯರ್ (ವಿ), (ಕಾ ಮತ್ತು ನಿ) ವೃತ್ತ, ಕವಿಪ್ರನಿನಿ, ಮುನಿರಾಬಾದ್.
3. ಅಧೀಕ್ಷಕ ಇಂಜಿನಿಯರ್ (ಸಿವಿಲ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
4. ಅಧೀಕ್ಷಕ ಇಂಜಿನಿಯರ್ (ವಿ), (ಐಟಿ ಮತ್ತು ಎಂಐಎಸ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
5. ಲೆಕ್ಕ ನಿಯಂತ್ರಣಾಧಿಕಾರಿ, ಪ್ರಸರಣ ವಲಯ, ಕವಿಪ್ರನಿನಿ, ಮೈಸೂರು/ಕಲಬುರಗಿ.
6. ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಟಿ.ಎಲ್ ಮತ್ತು ಎಸ್.ಎಸ್ ವಿಭಾಗ, ಕವಿಪ್ರನಿನಿ, ಲಿಂಗಸಗೂರು/ಮೈಸೂರು.
7. ಕಾರ್ಯನಿರ್ವಾಹಕ ಇಂಜಿನಿಯರ್(ಸಿವಿಲ್), ಪ್ರಸರಣ ವಲಯ, ಕವಿಪ್ರನಿನಿ, ಮೈಸೂರು/ಕಲಬುರಗಿ.
8. ಉಪ-ಲೆಕ್ಕ ನಿಯಂತ್ರಣಾಧಿಕಾರಿ (ಆಂತರಿಕ ಪರಿಶೋಧನೆ), ಪ್ರಸರಣ ವಲಯ, ಕವಿಪ್ರನಿನಿ, ಮೈಸೂರು/ಕಲಬುರಗಿ.
9. ಲೆಕ್ಕಾಧಿಕಾರಿ (ಕೋಡೀಫಿಕೇಷನ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.

<u>ಪ್ರತಿಯನ್ನು ಮಾಹಿತಿಗಾಗಿ ರವಾನಿಸಿದೆ:</u>

1. ಅಧ್ಯಕ್ಷರು ಕವಿಪ್ರನಿನಿ ನೌಕರರ ಸಂಘ (ನೋಂದಣಿ ಸಂಖ್ಯೆ 659), ಬೆಂಗಳೂರು ಮತ್ತು ನಿರ್ದೇಶಕರು, ಕವಿಪ್ರನಿನಿ ಮತ್ತು ಎಲ್ಲಾ ಎಸ್ಕಾಂಗಳು.
2. ಅಧ್ಯಕ್ಷರು, ಕವಿಮಂ ಇಂಜಿನಿಯರ್‌ಗಳ ಸಂಘ, ಬೆಂಗಳೂರು ಮತ್ತು ನಿರ್ದೇಶಕರು, ಕವಿಪ್ರನಿನಿ ಮತ್ತು ಎಲ್ಲಾ ಎಸ್ಕಾಂಗಳು.
3. ಪ್ರಧಾನ ಕಾರ್ಯದರ್ಶಿ, ಕ.ವಿ.ಪ್ರ.ನಿ.ನಿ, ನೌಕರರ ಸಂಘ, ಬೆಂಗಳೂರು.
4. ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರುಗಳ ಸಂಘ, ಬೆಂಗಳೂರು.
5. ಪ್ರಧಾನ ಕಾರ್ಯದರ್ಶಿ, ಕ.ವಿ.ಪ್ರ.ನಿ.ನಿ. ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು.
6. ಪ್ರಧಾನ ಕಾರ್ಯದರ್ಶಿ, ಕವಿಮಂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ (ರಿ), ಬೆಂಗಳೂರು.
7. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಡಿಪ್ಲೊಮ ಇಂಜಿನಿಯರ್‌ಗಳ ಸಂಘ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ/ ಎಸ್ಕಾಂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಧಿಕಾರಿಗಳ ಸಂಸ್ಥೆ, ಬೆಂಗಳೂರು.